# ಲೇಡಿ ಪೊಲೀಸ್ ಮೃಣಾಲ್

ಸಿದ್ಧಾರ್ಥ್ ಮಲ್ಹೋತ್ರಾ, ತಮಿಳಿನ ಸಿನಿಮಾವೊಂದರ ರೀಮೇಕ್ ಚಿತ್ರದಲ್ಲಿ ನಟಿಸುತ್ತಿರುವುದು ಗೊತ್ತೇ ಇದೆ. ಆದರೆ ಈಗ ಆ ಚಿತ್ರತಂಡಕ್ಕೆ ಲೇಡಿ ಪೊಲೀಸ್ ಪ್ರವೇಶವಾಗಿದೆ. ಅಂದರೆ ಲೇಡಿ ಪೊಲೀಸ್ ಪಾತ್ರದಲ್ಲಿ ಮೃಣಾಲ್ ಠಾಕೂರ್ ನಟಿಸುತ್ತಿದ್ದಾರೆ. ಈ ಚಿತ್ರದಲ್ಲಿ ಸಿದ್ಧಾರ್ಥ್ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಮೃಣಾಲ್ ನಟಿಸುತ್ತಿರುವ ಪಾತ್ರಕ್ಕೆ ಚಿತ್ರದಲ್ಲಿ ತುಂಬ ಮಹತ್ವವಿದೆಯಂತೆ. ಹಾಗಾಗಿ ಚಿತ್ರತಂಡವನ್ನು ಸೇರಿಕೊಳ್ಳಲು ಅವರು ತುದಿಗಾಲಿನಲ್ಲಿ ನಿಂತಿದ್ದಾರೆ. ಕಿರುತೆರೆಯಿಂದ ಈಗಷ್ಟೇ ಬಾಲಿವುಡ್‌ಗೆ ಜಿಗಿದು ನೆಲೆ ಕಂಡುಕೊಳ್ಳುತ್ತಿರುವ ಅವರಿಗೆ ಈ ಚಿತ್ರ ಭೂಮಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಎಂಬ ಲೆಕ್ಕಾಚಾರವೂ ಇದ್ದಂತಿದೆ.

ಚಿತ್ರದ ನಿರ್ಮಾಪಕ ಮುರಾದ್ ಖೇತಾನಿ ಅವರೇ ಮೃಣಾಲ್ ಚಿತ್ರದಲ್ಲಿ ನಟಿಸುತ್ತಿರುವುದನ್ನು ಖಚಿತಪಡಿಸಿದ್ದಾರೆ. ಆದರೆ ಅವರು ಚಿತ್ರದ ನಾಯಕಿಯಲ್ಲ. ಸಿದ್ಧಾರ್ಥ್ ಅವರ ಪ್ರೇಯಸಿಯಾಗಿಯೂ ಕಾಣಿಸಿಕೊಳ್ಳುತ್ತಿಲ್ಲ. ಆದರೆ ಬೇರೆಯದೇ ರೀತಿಯ ಮಹತ್ವದ ಪಾತ್ರದಲ್ಲಿ ನಟಿಸುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

ವರ್ಧನ್ ಕೇತ್ಕರ್ ನಿರ್ದೇಶಿಸುತ್ತಿರುವ ಈ ಚಿತ್ರಕ್ಕೆ ಇನ್ನೂ ಶೀರ್ಷಿಕೆ ಅಂತಿಮಗೊಂಡಿಲ್ಲ. ಮೇ ತಿಂಗಳಲ್ಲಿ ಚಿತ್ರೀಕರಣ ಆರಂಭವಾಗಲಿದ್ದು, ಬಹುಭಾಗವನ್ನು ದೆಹಲಿಯಲ್ಲಿಯೇ ಚಿತ್ರೀಕರಿಸಲು ತಂಡ ಯೋಜನೆ ಹಾಕಿಕೊಂಡಿದೆ. ಮೃಣಾಲ್ ಪಾಲಿಗೆ ಈ ಚಿತ್ರ ಎತ್ತರಕ್ಕೇರುವ ಮೆಟ್ಟಿಲಾಗಿ ಪರಿಣಮಿಸುವುದೇ ಎಂಬ ಪ್ರಶ್ನೆಗೆ ಬಿಡುಗಡೆಯ ನಂತರವೇ ಉತ್ತರ ಸಿಗಲಿದೆ.





# ಅಶ್ವತ್ಥಾಮನ ಟ್ರೈಯಾಲಜಿ

‘ಉರಿ – ದ ಸರ್ಜಿಕಲ್ ಸ್ಟ್ರೈಕ್’ ಸಿನಿಮಾ ನಂತರ ವಿಕ್ಕಿ ಕೌಶಾಲ್ ವೃತ್ತಿಬದುಕಿನ ದೆಸೆಯೇ ಬದಲಿಸಿ. ಈಗ ರೋನಿ ಸ್ಕ್ರೂವಾಲಾ ಮತ್ತು ಆದಿತ್ಯ ಧರ್ ಜೊತೆ ಸೇರಿಕೊಂಡು ‘ಇಮ್ಮಾರ್ಟಲ್ ಅಶ್ವತ್ಥಾಮ’ ಸಿನಿಮಾದಲ್ಲಿ ಬ್ಯುಸಿ ಆಗಿದ್ದಾರೆ. ಈಗಾಗಲೇ ಚಿತ್ರದ ಬಹುತೇಕ ಭಾಗ ಚಿತ್ರೀಕರಣವಾಗಿದೆ. ಭಾರತದ ವಿವಿಧ ಸ್ಥಳಗಳಲ್ಲಿ ಮತ್ತು ವಿದೇಶಗಳಲ್ಲಿಯೂ ಚಿತ್ರೀಕರಣ ಮಾಡಲಾಗಿದೆ. 2020 ಮುಗಿಯುವುದರೊಳಗೆ ಚಿತ್ರವನ್ನು ಪೂರ್ತಿಗೊಳಿಸುವ ಗುರಿಯನ್ನು ಚಿತ್ರತಂಡ ಹಾಕಿಕೊಂಡಿದೆ. ಈ ಚಿತ್ರಕ್ಕಾಗಿ ವಿಕ್ಕಿ ನಾಲ್ಕು ತಿಂಗಳುಗಳ ಕಾಲ ಸಿದ್ಧತೆ ನಡೆಸಿದ್ದಾರಂತೆ.

ಈ ಎಲ್ಲದರ ನಡುವೆ ಚಿತ್ರತಂಡ ಇನ್ನೊಂದು ಸುದ್ದಿಯನ್ನು ಜಾಹೀರುಗೊಳಿಸಿದೆ. ‘ಇಮ್ಮಾರ್ಟಲ್ ಅಶ್ವತ್ಥಾಮ’ ಟ್ರೈಯಾಲಜಿ. ಈಗ ಸಿದ್ಧಗೊಳ್ಳುತ್ತಿರುವ ಸಿನಿಮಾದ ಮುಂದುವರಿದ ಅವತರಣಿಕೆ ಬರಲಿದೆ ಎಂಬುದೇ ಆ ಸುದ್ದಿ. ಚಿತ್ರದ ನಿರ್ದೇಶಕ ಆದಿತ್ಯ ಧರ್ ಅವರೇ ಈ ಸುದ್ದಿಯನ್ನು ಖಚಿತಪಡಿಸಿದ್ದಾರೆ. ತಮ್ಮ 37ನೇ ಜನ್ಮದಿನದ ಸೆಲೆಬ್ರೇಷನ್‌ನಲ್ಲಿ ಅವರು ‘ಇದೊಂದು ಟ್ರಯಾಲಜಿ’ ಎಂದು ಹೇಳಿದ್ದಾರೆ. ಆದರೆ ಮೊದಲ ಭಾಗಕ್ಕೆ ಜನಸ್ಪಂದನ ಹೇಗೆ ಸಿಗುತ್ತದೆ ಎಂಬುದನ್ನು ನೋಡಿಕೊಂಡು ಮುಂದಿನ ಭಾಗಗಳನ್ನು ರೂಪಿಸಬೇಕೇ ಬೇಡವೇ ಎಂದು ಅವರು ನಿರ್ಧರಿಸುತ್ತಾರಂತೆ.

ಈ ಚಿತ್ರಕ್ಕಾಗಿ ವಿಕ್ಕಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅಶ್ವತ್ಥಾಮನ ಪಾತ್ರಕ್ಕೆ ಜೀವತುಂಬಲಿಕ್ಕೆಂದೇ ಅವರು ತಮ್ಮ ದೇಹದ ತೂಕವನ್ನು 115 ಕೆ.ಜಿ.ಗಳಿಗೆ ಏರಿಸಿಕೊಂಡಿದ್ದಾರೆ. ಮಾರ್ಷಲ್ ಆರ್ಟ್ ಸೇರಿದಂತೆ ಹಲವು ಬಗೆಯ ಸಮರಕಲೆಗಳನ್ನು ಕಲಿತಿದ್ದಾರೆ. ಕುದುರೆ ಸವಾರಿ ರೂಢಿಸಿಕೊಂಡಿದ್ದಾರೆ.

■ ಮಾಂಟೊ